ಕೊಡುತ್ತದೋ, ಆ ಜೋಡಿಯನ್ನು 'ಸಕತ್ ಸತಿಪತಿ' ಎಂದು ತೀರ್ಮಾನಿಸುವುದಾಗಿ ಪ್ರಚಾರವಾಯಿತು. ಕಾರ್ಯಕ್ರಮವು ದೂರದರ್ಶನದಲ್ಲಿ ಬಿತ್ತರವಾಗುತ್ತದೆ. ಪ್ರಶ್ನೆ ಕೇಳುತ್ತ ಕಾರ್ಯಕ್ರಮ ನಡೆಸಿಕೊಡುವವರು ಜನಪ್ರಿಯ ಸಿನಿಮಾ ನಟ ನಟಿಯರು ಎಂಬ ಸುದ್ದಿ ವೈರಲ್ ಆಯಿತು. ಜನ ಹುಚ್ಚೆದ್ದು ಕುಣಿದರು.

ಟಿ.ವಿ. ಚಾನೆಲ್‌ಗಳವರು ಟಿ.ಆರ್.ಪಿ. ಹೆಚ್ಚಿಸಿಕೊಳ್ಳಲು ಬೆನ್ನಿಗಿರಿಯುವ ಸ್ಪರ್ಧೆಗೆ ಬಿದ್ದಿದ್ದರು. ಅಭಿರುಚಿಹೀನ ಜಾಹೀರಾತು, ಸೀರಿಯಲ್‌ಗಳು ಪ್ರದರ್ಶನಗೊಳ್ಳುತ್ತಿದ್ದವು. ಮೊದಮೊದಲು ಮನೆಯವರೆಲ್ಲ ಕುಳಿತು ನೋಡಲು ಮುಜುಗರಪಡುತ್ತಿದ್ದ ದೃಶ್ಯ, ಸಂಭಾಷಣೆಗಳನ್ನು ಜೊತೆಯಲ್ಲಿಯೇ ಆನಂದಿಸತೊಡಗಿದ್ದರು. ಧಾರಾವಾಹಿಗಳ ಕಥೆ, ಸಂಭಾಷಣೆಗಳನ್ನು ನೆನಪಿಟ್ಟುಕೊಳ್ಳಲು ಕಷ್ಟಪಡುತ್ತಿದ್ದ ಮನೆ ಹಿರಿಯರಿಗೆ ಸಣ್ಣಪುಟ್ಟ ಹುಡುಗರು ಜ್ಞಾಪಿಸಿಕೊಟ್ಟು 'ಶಭಾಷ್' ಎನಿಸಿಕೊಳ್ಳುತ್ತಿದ್ದರು. ಬರುಬರುತ್ತ ಹಿರಿಯರೇ ಮಕ್ಕಳಿಗೆ ಹಿಂದಿನದನ್ನು ನೆನಪಿಸುವಂತಾದರು.

'ಸಕತ್ ಸತಿಪತಿ' ಸ್ಪರ್ಧೆಯಲ್ಲಿ ಗೆಲ್ಲುವ ಜೋಡಿಗಳಿಗೆ ಹಲವಾರು ಕಂಪನಿಗಳು ಬಹುಮಾನಗಳನ್ನು ಘೋಷಿಸಿದ್ದವು. ಮೊದಲ ಜೋಡಿಗೆ 15 ಲಕ್ಷ, ಎರಡನೆಯವರಿಗೆ 10 ಲಕ್ಷ, ಮೂರನೆಯವರಿಗೆ 5 ಲಕ್ಷ ರೂಪಾಯಿ ಬಹುಮಾನ ಮತ್ತು ವಿವಿಧ ಕಂಪನಿಗಳು ಟಿ.ವಿ., ಫ್ರಿಡ್ಜ್, ಮೊಬೈಲ್, ಕಂಪ್ಯೂಟರ್, ವಾಷಿಂಗ್ ಮೆಷಿನ್, ಮಿಕ್ಸಿ, ಸೋಫಾ ಸೆಟ್, ಘಮ ಘಮ ಸೆಂಟು ಮುಂತಾದವುಗಳನ್ನು ಧಾರಾಳವಾಗಿ ಕೊಡುವವರಿದ್ದರು. ಫುಟ್ ರಗ್ಗು, ಊದಿನ ಕಡ್ಡಿ, ಪೊರಕೆ, ಫಿನಾಯಿಲ್, ನೆಲ ಒರೆಸುವ ಬಟ್ಟೆ, ಪಾತ್ರೆ ತೊಳೆಯುವ ಬ್ರಶ್ಶು ಮುಂತಾದವುಗಳನ್ನು ಸಹ ಗೆದ್ದವರ ಮನೆಗಳಿಗೆ ಲಾರಿಗಳಲ್ಲಿ ತಲುಪಿಸುವುದಾಗಿ ನಗರದ ತುಂಬ ಜಾಹೀರಾತು ಫಲಕಗಳು ಎದ್ದು ನಿಂತವು.

ಈ ಕಾರ್ಯಕ್ರಮದ ವಿರುದ್ಧ ಕೆಲವರು ಪ್ರತಿಭಟಿಸಿದರು. ಇವು ಜನರನ್ನು ನೈತಿಕವಾಗಿ ದಿವಾಳಿ ಮಾಡುತ್ತವೆ ಎಂಬುದು ಅವರ ವಾದವಾಗಿತ್ತು. ಆದರೆ, ಅವರಿಗೆ ಏಟು ಬಿದ್ದವಷ್ಟೇ ಅಲ್ಲದೆ ಜೀವ ಬೆದರಿಕೆಯಿಂದ ತಾತ್ಕಾಲಿಕವಾಗಿ ಅವರು ಊರನ್ನೇ ಬಿಡಬೇಕಾಯಿತು. ಜಾಹೀರಾತಿನಿಂದ ಕೋಟಿಗಟ್ಟಲೆ ಹಣ ಮಾಡುತ್ತಿದ್ದ 'ವೆಲಾಸಿಟಿ' ವಾಹಿನಿಯು ಸರ್ಕಾರದ ಪ್ರಭಾವಿ ಮಂತ್ರಿಯ ಸ್ವತ್ತಾಗಿತ್ತು. ಹಾಗಾಗಿ ಎಲ್ಲವುದಕ್ಕೂ ಪರವಾನಗಿ ಇತ್ತು. ದುಡ್ಡು, ಮೋಜುಮಸ್ತಿಯ ದಾಸಾನುದಾಸರಾಗಿದ್ದರಿಂದಲೋ ಏನೋ ಜನರ ಮನದಲ್ಲಿ ಅಳುಕಿದ್ದು ಪಾಪ ಪ್ರಜ್ಞೆಯಿಂದ ನರಳುತ್ತಿದ್ದರು. ಈ ದೌರ್ಬಲ್ಯದ ಲಾಭ ಪಡೆದು ನಗರದಲ್ಲಿ ಅನೇಕ ಜಗದ್ಗುರುಗಳು ಹುಟ್ಟಿಕೊಂಡಿದ್ದರು. ಇಂಥ ಆಧ್ಯಾತ್ಮಿಕ ಗುರುಗಳ ಮನೆಗೆ ಹಲವು ಕಂಪನಿಗಳಿಂದ ಕೊಡುಗೆಗಳು ಈಗಾಗಲೇ ಸದ್ದಿಲ್ಲದೆ ತಲುಪಿದ್ದವು. ಅವರು ಗಪ್‌ಚುಪ್ ಆಗಿದ್ದರು. ಇಡೀ ಸನ್ನಿವೇಶದ ಅರಿವಿದ್ದ ಅನೇಕರ ಮೌನವು ಕೇಡಿಗೆ ಕುಮ್ಮಕ್ಕು ಕೊಟ್ಟಂತಿತ್ತು. ನಗರವಾಸಿಗಳು ಭ್ರಮಾಧೀನರಂತೆ ದಿನಗಳನ್ನು, ಗಂಟೆಗಳನ್ನು, ನಿಮಿಷಗಳನ್ನು ಎಣಿಸುತ್ತ, ಚಡಪಡಿಸುತ್ತ ಜನ್ಮದ ಅವಕಾಶವಾದ 'ಸಕತ್ ಸತಿಪತಿ' ಕಾರ್ಯಕ್ರಮಕ್ಕಾಗಿ ಕಾಯತೊಡಗಿದರು.

ಹರೆಯದ ಜೋಡಿಗಳು ಈ ಕಾರ್ಯಕ್ರಮವು ತಮ್ಮಂಥ ಎಳೆಯ ಪ್ರೇಮಿಗಳ ಪ್ರೋತ್ಸಾಹಕ್ಕಿರಬೇಕೆಂದುಕೊಂಡರು. ಅವರು ತಮ್ಮ ಪ್ರೇಮವು ಎಷ್ಟು ದಿಟ್ಟ, ಗಾಢ, ತೀವ್ರ, ರೋಮಾಂಚನಕಾರಿ ಎಂದು ಖುಷಿಯಾಗಿ ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡರು. ಮದುವೆಯಾಗಿ ಹತ್ತಿಪ್ಪತ್ತು ವರ್ಷಗಳಾಗಿದ್ದ ನಡುವಯಸ್ಕರು ಮತ್ತು ಅಜ್ಜ ಅಜ್ಜಿಯರು ಇದು ಕಾಲಾನುಕ್ರಮದಲ್ಲಿ ಮಾಗಿದ ತಮ್ಮ ಪ್ರೀತಿಯ ಪರೀಕ್ಷೆ ಹಾಗೂ ಸನ್ಮಾನಕ್ಕಿರಬೇಕೆಂದುಕೊಂಡರು. ಈ ಸ್ಪರ್ಧೆಯಲ್ಲಿ ಎಂಥ ಪ್ರಶ್ನೆಗಳು ಎದುರಾಗಬಹುದೆಂದು ಯಾರಿಗೂ ಗೊತ್ತಿರಲಿಲ್ಲ. ಬರೀ ಅಂದಾಜು ಊಹಾಪೋಹದ ಮೇಲೆ ಅನೇಕರು ದಿನಪತ್ರಿಕೆ, ನಿಯತಕಾಲಿಕೆ, ಇಯರ್‌ಬುಕ್, ಲೋಕ ಪ್ರಸಿದ್ಧ ದಂಪತಿಗಳ ಆತ್ಮಚರಿತ್ರೆ, ಜನರಲ್ ನಾಲೆಡ್ಜ್ ಪುಸ್ತಕಗಳನ್ನು

